2. ನಿಯಮ 69 ರ ಮೇರೆಗೆ ಚರ್ಚೆ

ವಿಷಯ : ರೈತರ ಸಾಲ ಮರುಪಾವತಿ ಅವಧಿಯನ್ನು ಮಾರ್ಚ್ 2006 ರ ವರೆಗೆ ವಿಸ್ತರಿಸುವ ಬಗ್ಗೆ ಬಿ.ಜೆ.ಪಿ. ಸದಸ್ಯರಿಂದ ಧರಣಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ ಆಳುವ ಪಕ್ಷದ ಕಡೆಯಿಂದ ಸಮ್ಮಿಶ್ರ ಸರ್ಕಾರದಲ್ಲಿ 15 ಜನ ಸದಸ್ಯರು ಇದ್ದಾರೆ.

ಶ್ರೀ ಅರಗ ಜ್ಞಾನೇಂದ್ರ :– ಇವತ್ತು ಅಳುವ ಪಕ್ಷ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇಲ್ಲಿ ಕಾಗುಣಿತ ತಪ್ಪು ಆಗಿದೆ.....

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಧರಣಿ ನಡೆಸಲು ಸದನದ ಬಾವಿಗೆ ಬಂದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯವನ್ನು ಅತ್ಯಂತ ವಿನಯದಿಂದ ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರತಿ ಪಕ್ಷಗಳ ಜೊತೆಗೆ ಆಡಳಿತ ಪಕ್ಷವೂ ಸ್ವಲ್ಪ ಗೌರವದಿಂದ ನಡೆದುಕೊಳ್ಳುವಂತೆ ತಾವು ತಿಳಿಸಬೇಕು. ನಿನ್ನೆ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಇಲ್ಲಿ ಕುಳಿತುಕೊಳ್ಳುವಂಥಾದ್ದು ಅವರ ಕರ್ತವ್ಯವಾಗಿತ್ತು. ಆದರೆ ಅವರು ರಾಜಕಾರಣದಲ್ಲಿ ತಲ್ಲೀನರಾಗಿದ್ದರು. 11 ಗಂಟೆಗೆ ಅಥವಾ 12 ಗಂಟೆಗೆ ವಿಧಾನ ಪರಿಷತ್ತಿನ ಅಧಿವೇಷನ ಪ್ರಾರಂಭವಾಗಿದ್ದು, ಅವರು ಅಲ್ಲಿಗೆ ಹೋಗಿದ್ದರೆ ಅದನ್ನು ನಾವು ಬೇಡವೆನ್ನುತ್ತಿರಲಿಲ್ಲ. ಆದರೆ ಅವರು ಇಲ್ಲಿಗೆ ಬರಲಿಲ್ಲ. ಇವರು ರಾಜ್ಯದ ಉದ್ಧಾರಕರೆಂದು ಬೊಬ್ಬೆ ಹೊಡೆಯುತ್ತಿರುತ್ತಾರೆ. ಇಲ್ಲಿ ಇಂತಹ ಜ್ವಲಂತ ಸಮಸ್ಯೆಯ ಬಗ್ಗೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಇರಲಿಲ್ಲ. ಅದು ನಿಮಗೆ ಬಿಟ್ಟ ವಿಚಾರ. ಆದರೆ ಇಲ್ಲಿಗೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಬರಬೇಕಾ? ನನ್ನ ಬಗ್ಗೆ ಅವರು ಹೇಳಿದರು, ಬಿ.ಜೆ.ಪಿ ಪಕ್ಷದ ಬಗ್ಗೆ ಹೇಳಿದರು. ನಾವೆಲ್ಲಾ ಪ್ರತಿಪಕ್ಷದವರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಕ್ಕೆ ನೀವೆಲ್ಲಾ ರಾಜಕೀಯ ಮಾಡುತ್ತಿದ್ದೀರಿ ಎಂದು ಹೇಳಿದರು. ಇದು ರಾಜಕೀಯವೇ? ಈ ರಾಜ್ಯದ ರೈತ ಸತತವಾಗಿ 4 ವರ್ಷಗಳು ಬರಗಾಲಕ್ಕೆ ತುತ್ತಾಗಿ ಸಾಯುತ್ತಾ ಇರಬೇಕಾದರೆ, ಇನ್ನೂ ಬಿತ್ತನೆಯ ಕೆಲಸ ಆರಂಭವಾಗಿಲ್ಲ. ಕುಡಿಯುವ ನೀರಿನ ಹಾಹಾಕಾರ ಇದೆ. ಇದರ ಬಗ್ಗೆ ಹೇಳುವವರು, ಕೇಳುವವರು ಯಾರೂ ಇಲ್ಲ. ಇಂತಹ ಸಂದರ್ಭದಲ್ಲಿ ನೀವೇ ಪ್ರಾರಂಭ ಮಾಡಿದಂತಹ, ನೀವೇ ಹೇಳಿದಂತಹ ಯೋಜನೆ, ಅದು ರೈತನ ಸಾಲದ ಮೇಲೆ ಬಡ್ಡಿಯನ್ನು ಮನ್ನಾ

ಮಾಡುವಂತಹ ಯೋಜನೆ. ನಾನು ರಾತ್ರಿ ಇಡೀ ನಿದ್ದೆಯನ್ನು ಮಾಡಲಿಲ್ಲ. ಈ ಸರಕಾರಕ್ಕೆ ಏನು ಆಗಿದೆ? ಆಡಳಿತ ಪಕ್ಷ ವಿರೋಧ ಪಕ್ಷ ಒಂದೇ ಪಾತ್ರ ನಿಮ್ಮದು? ಇದು ಏಕಪಾತ್ರ ಅಭಿನಯವೇ ನಿಮ್ಮದು? ಹೊರಗಡೆ ನೀವು ಹೇಳಿಕೆಗಳನ್ನು ಕೊಡುತ್ತೀರಿ ಪ್ರತಿಪಕ್ಷಗಳು ಕೆಲಸವನ್ನು ಮಾಡುತ್ತಿಲ್ಲ, ರೈತರ ಉದ್ಧಾರಕರು ನಾವು ಎಂದು. ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ. ನಿಮಗೆ ಏನು ಧಾಡಿಯಾಗಿದೆ? ಈ ರಾಜ್ಯದ ರೈತರಿಗೆ ಭಿಕ್ಷೆಯನ್ನು ಕೊಡುತ್ತೀರಾ? ಇವರು ಒಂದು ತಿಂಗಳು ಮುಂದುವರೆಸಿದ್ದಾರೆ ಅವರು ಏನು ದುಡ್ಡು ಪ್ರಿಂಟ್ ಮಾಡಿ ನಿಮಗೆ ವಾಪಸ್ಸು ಕಟ್ಟುತ್ತಾರಾ ನಿಮಗೆ? ನಾನು ಇಲ್ಲಿ ವಿನಂತಿಯನ್ನು ಮಾಡಿದ್ದೇನೆ. ಇಲ್ಲಿ ಆಡಳಿತ ಪಕ್ಷ ವಿರೋಧ ಪಕ್ಷವೆಂಬ ಭೇದ ಭಾವನೆ ಬೇಡ, ಒಟ್ಟಾಗಿ ಈ ಸಮಸ್ಯೆಗೆ ಪರಿಹಾರವನ್ನು ಹುಡುಕೋಣವೆಂದು ನಾವು ಪ್ರಯತ್ನವನ್ನು ಮಾಡಿದ್ದೇವೆ. ಇವರು ಒಂದು ತಿಂಗಳು ಮುಂದೂಡಿದ್ದಾರೆ. ನಾನು ಮಾನ್ಯ ಸಿದ್ಧರಾಮಯ್ಯನವರನ್ನು ಕೇಳುತ್ತೇನೆ. ನಿಮ್ಮ ಆಡಳಿತ ಪಕ್ಷದ ಸದಸ್ಯರನ್ನು ಕೇಳುತ್ತೇನೆ ಏನು ನೋಟು ಪ್ರಿಂಟ್ ಮಾಡುತ್ತಾರಾ? ರೈತರಿಗೆ ಹೊರಗಡೆಯಿಂದ ದುಡ್ಡು ಬರುತ್ತದೆಯೇ? ಅವನು ಬಚ್ಚಿಟ್ಟಿದ್ದಾನೆಯೇ? ರೈತನ ಜೀವನದಲ್ಲಿ ಚೆಲ್ಲಾಟಮಾಡುವುದಕ್ಕೂ ನಾವು ಮಾರ್ಚ್ ತಿಂಗಳಿನವರೆಗೂ ಕಾಲಾವಕಾಶಕೊಡಿ ಎಂದು ಕೇಳಿದೆವು. ಇದರಲ್ಲಿ ನೀವು ಪ್ರಿಸ್ಟೀಜ್ ತೆಗೆದುಕೊಳ್ಳುತ್ತಿರಾ? ಇಲ್ಲದಿದ್ದರೆ ಡಿಸೆಂಬರ್ ತಿಂಗಳವರೆಗೂ ಅವಧಿ ವಿಸ್ತರಣೆ ಮಾಡಿ, ಅದರಿಂದ ಸ್ವಲ್ಪ ಹೊಂದಿಸಿಕೊಂಡು ಅವರು ಕೊಡುತ್ತಾರೆ. ಇವತ್ತು ಶುಕ್ರವಾರ ಅಧಿವೇಶನ ಮುಗಿಯುತ್ತಾ ಇದೆ. ನೀವು 4–5 ಜನ ಸದಸ್ಯರುಗಳನ್ನು 5–6 ಜಿಲ್ಲೆಗಳಿಗೆ ಕಳುಹಿಸಿ. ಅಲ್ಲಿ ನಿನ್ನೆ ದಿವಸ ರೈತರು ಕ್ಯೂ ನಿಂತುಕೊಂಡು ಸಾಲವನ್ನು ಕಟ್ಟಿದ್ದಾರೋ, ಇಲ್ಲವೋ ಎಂಬುದನ್ನು ನೋಡಿ. ಅಲ್ಲಿ ಎಷ್ಟೋ ಜನರು ತಾಳಿ ಮಾರಿರಬಹುದು, ಮನೆಯಲ್ಲಿರುವಂತಹ ಅಲ್ಪಸ್ವಲ್ಪ ಬಂಗಾರ, ಬೆಳ್ಳಿ ಇದ್ದರೆ, ಅದನ್ನು ಒತ್ತೆ ಇಟ್ಟು 10 ಸಾವಿರ, 20 ಸಾವಿರ ರೂಪಾಯಿಗಳನ್ನು ಖಾಸಗಿಯವರಿಂದ ತಂದು ಜಮಾ ಮಾಡಿದ್ದಾರೆ. ಮನೆಯಲ್ಲಿದ್ದ ಬೆಳ್ಳಿ, ಬಂಗಾರ ಒತ್ತೆ ಇಟ್ಟು ಮಾಡಿದ್ದಾರೆ. ನಾವು ಈ ಪರಿಸ್ಥಿತಿಯನ್ನು ತರಬಾರದೆಂದು ಕಳಕಳಿಯಿಂದ ವಿನಂತಿ ಮಾಡಿಕೊಂಡೆವು. ಅದು ನಿನ್ನೆಯ ದಿವಸ ಇಂತಹ ಗಂಭೀರವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದಾಗ ಕೊಠಡಿಗೆ ಕರೆದು ಮಾತನಾಡುವ ಸೌಜನ್ಯವೂ ಈ ರಾಜ್ಯ ಸರ್ಕಾರಕ್ಕೆ ಇಲ್ಲ. ನಾವು ಏಕಾಏಕಿ ಧರಣಿ ಕುಳಿತಿದ್ದೆವು, ಆಯಿತು. ನಾವು ಹೋಗುತ್ತೇವೆ ಮುಂದೆ, ನೀವು ಏನು ನಡೆಸಿದ್ದೀರಾ? ನಾವು ಮಾನ್ಯ ಹೆಚ್.ಕೆ. ಪಾಟೀಲ್‌ರವರನ್ನು ಕೇಳುತ್ತೇವೆ. ನಿಮ್ಮ ತಂದೆಯವರು ಇಲ್ಲಿ ಮಾತನಾಡುವ ಕಾಲದಲ್ಲಿ ನಾವು ಇಲ್ಲಿ ಇದ್ದೆವು. ಅವರು ರೈತರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದಂಥಾದ್ದನ್ನು ನೋಡಿದ್ದೇವೆ. ಆದರೆ ಇವತ್ತು ನಿಮ್ಮನ್ನು ನಾವು ಏನು ಕೇಳಿದೆವು? ಒಂದು ಈ ಸಾಲವನ್ನು ಅಂದರೆ ಅಸಲು ಕಟ್ಟುವಂತಹ ಅವಧಿಯನ್ನು

ಮಾರ್ಚ್ 2006 ರವರೆಗೂ ವಿಸ್ತರಣೆ ಮಾಡಿ ಎಂದು ಕೇಳಿದೆವು. ನೀವು ನಮ್ಮನ್ನು ಕರೆದು ಕೇಳಬಹುದಾಗಿತ್ತಲ್ಲಾ, ಚರ್ಚೆ ಮಾಡಬಹುದಾಗಿತ್ತಲ್ಲ, ನೀವು ಒಂದು ತಿಂಗಳಲ್ಲಿ ವಾಪಸ್ಸು ಕಟ್ಟಿ ಎಂದು ಹೇಳುತ್ತೀರಿ. ನೀವು ಭಿಕ್ಷೆಯನ್ನು ಕೊಡುತ್ತೀರಾ? ನೀವು ರೈತರ ಜೊತೆ ಹೇಗೆ ಬೇಕಾದರೂ ನಡೆದುಕೊಳ್ಳಬಹುದೆಂದು ತಿಳಿದುಕೊಂಡಿದ್ದೀರಾ? ನಾನು ಎರಡನೆಯದಾಗಿ ಏನು ನಿಮಗೆ ಹೇಳಿದೆ ಇದನ್ನು 2004–05 ಕ್ಕೂ ವಿಸ್ತರಣೆ ಮಾಡಿ ಎಂದು ಕೇಳಿದೆ. ಇದು ಸಹ ಬರಗಾಲವೇ ತಾನೆ? ನೀವು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಬರಗಾಲವೆಂದು ವರದಿಯನ್ನು ಕೊಟ್ಟಿದ್ದೀರಾ ತಾನೆ? ಅದನ್ನು ಮನ್ನಾ ಮಾಡಿಯೆಂದು ಕೇಳಿದೆವು. ಇಲ್ಲಿ ಯಾರು ಹಣವನ್ನು ಕಟ್ಟಿದ್ದಾರೆ, ಅವರ ಬಡ್ಡಿ ಮೊತ್ತವನ್ನು ವಾಪಸ್ಸು ಕೊಡಿ, ಎಂದು ಕೇಳಿದೆವು. ಅದಕ್ಕೆ ನೀವು ಏನು ಭರವಸೆಯನ್ನು ಕೊಟ್ಟಿದ್ದೀರಿ. ಅದನ್ನು ವಾಪಸ್ಸು ಕೊಡುತ್ತೇವೆಂದು ನಿಮ್ಮ ಬಾಯಲ್ಲಿ ಬಂತಾ? ಕೇಂದ್ರ ಸರ್ಕಾರದಲ್ಲಿ ಇಲ್ಲಿ ನನಗೂ ಇತಿಮಿತಿಗಳ ಬಗ್ಗೆ ಅರ್ಥವಾಗುತ್ತದೆ. ಸಾಲ ಮನ್ನಾ ಆಗಬೇಕು ಎಂದು ಹೇಳಿದ್ದಿರಾ? ಶೇ 6 ರಷ್ಟು ಬಡ್ಡಿಯಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಎಲ್ಲಾ ರೀತಿಯ ಸಾಲ ಸಿಗಬೇಕೆಂಬ ಬಗ್ಗೆ ಹೇಳಿದ್ದಿರಾ? ಬಡ್ಡಿ ಮನ್ನಾ ಮಾಡಿರುವಂಥಾದ್ದು ಕೋ–ಆಪ್‌ರೇಟಿವ್ ಇನ್ಸ್‌ಟ್ಯೂಷನದ್ದು, ಇಲ್ಲಿ ರೈತರು ಬರಗಾಲಕ್ಕೆ ತುತ್ತಾಗಿದ್ದಾರೆಂದು ಮಾಡಿದ್ದೇವೆ. ಕೇಂದ್ರ ಸರ್ಕಾರ ಒಂದು ಸಾರಿ ಈ ಬಡ್ಡಿಯನ್ನು ಮನ್ನಾ ಮಾಡಲಿ, ಸಾಲವನ್ನು ಮನ್ನಾ ಮಾಡುವುದಕ್ಕೆ ಆಗದಿದ್ದರೆ, ನಾವು ಅವನನ್ನು ಉಳಿಸೋಣ. ನೀವು ಅದನ್ನು ಅಲ್ಲಿ ಹೇಳಿದ್ದೀರಾ? ಇವತ್ತು ಮಾನ್ಯ ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿ, ಇಡೀ ದೇಶದಲ್ಲೇ ತೆರಿಗೆ ಸಂಗ್ರಹದಲ್ಲಿ ಮೊದಲನೆಯ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ. ಅಭಿವೃದ್ಧಿ ಕಾರ್ಯಗಳಲ್ಲಿ ಕೂನೆಯ ಸ್ಥಾನ, ನಾನು ಹೇಳುವಂಥಾದ್ದು ರಾಜಕೀಯದಲ್ಲೂ ಇತಿಮಿತಿ ಇರಬೇಕು. ನಾವು ಅತ್ಯಂತ ಪ್ರಾಮಾಣಿಕವಾಗಿ ವಿರೋಧ ಪಕ್ಷದಲ್ಲಿ ಇದ್ದುಕೊಂಡು, ನಮ್ಮ ಕರ್ತವ್ಯವನ್ನು ಮಾಡೋಣವೆಂದು, ಶಾಂತ ರೀತಿಯಲ್ಲಿ ಈ ಸದನವನ್ನು ನಡೆಸೋಣವೆಂದು, ನಾವು ಸಹಕಾರವನ್ನು ಕೊಟ್ಟರೆ ಇಲ್ಲಿ ಹೇಗೆ ಬೇಕಾದರೂ ಆಟವನ್ನು ಆಡಬಹುದೆಂದುಕೊಂಡಿದ್ದೀರಾ? ನಮ್ಮನ್ನು ಅಸಹಾಯಕರು ಎಂದು ತಿಳಿದುಕೊಂಡಿದ್ದೀರಾ? ಸ್ವಾಮಿ ಇದು ನಡೆಯುವುದಿಲ್ಲ. ಈ ಅಧಿವೇಶನ ಹೀಗೆಯೇ ಮುಗಿಯಲಿ ನೋಡೋಣ, ಬೇರೆ ಬೇರೆ ರಾಜ್ಯಗಳಲ್ಲಿ ನಿಮ್ಮ ಕಾಂಗ್ರೆಸ್ ಪಕ್ಷದವರು ವಿರೋಧ ಪಕ್ಷದಲ್ಲಿ ಕೆಲಸವನ್ನು ಮಾಡುವಂಥಾದ್ದನ್ನು ನಾವು ನೋಡಿದ್ದೇವೆ. ಆದರೆ ಕಳೆದ 16 ತಿಂಗಳಲ್ಲಿ ಈ ರಾಜ್ಯಕ್ಕೆ ಮಾದರಿಯಾಗುವಂಥ ರೀತಿಯಲ್ಲಿ ಪ್ರತಿಪಕ್ಷದವರು ಕೆಲಸವನ್ನು ಮಾಡಿದ್ದೇವೆ. ನೀವು ಹೊರಗಡೆ ಹೋಗಿ, ಪ್ರತಿಪಕ್ಷದವರು ಕರ್ತವ್ಯವನ್ನು ಮಾಡುತ್ತಿಲ್ಲ ಎಂದು ಹೇಳುತ್ತೀರಿ. ನಿಮ್ಮ ಹಾಗೆ ರಾಜಕೀಯವನ್ನು ಮಾಡಬೇಕಾಗಿತ್ತಾ?

ವಿಧಾನಸೌಧದ ಹೊರಗಡೆ ಕುಣಿಯುವುದು, ಕುಸ್ತಿಯನ್ನಾಡುವುದು, ಮತ್ತೆ ವಿಧಾನಸೌಧದ ಒಳಗಡೆ ಬಂದು ಹೊಂದಾಣಿಕೆಯನ್ನು ಮಾಡಿಕೊಳ್ಳುವಂಥಾದ್ದು. ಈ ರಾಜಕಾರಣವನ್ನು ಯಡಿಯೂರಪ್ಪಾ ಮಾಡಬೇಕಾಗಿತ್ತಾ? ಬಿ.ಜೆ.ಪಿಯವರು ಮಾಡಬೇಕಾಗಿತ್ತಾ? ಪ್ರತಿಪಕ್ಷದಲ್ಲಿ ಕುಳಿತಿರುವವರು ಮಾಡಬೇಕಾಗಿತ್ತಾ? ಈ ರೀತಿಯ ಸಹಕಾರವನ್ನು ನಾವು ಕೊಟ್ಟರೂ ಸಹಿತ, ಇವತ್ತು ರಾಜ್ಯದ ರೈತರ ಜ್ವಲಂತ ಸಮಸ್ಯೆಯ ಬಗ್ಗೆ ಪರಿಹಾರ ಹುಡುಕಬೇಕೆಂದು ನಾವು ನಿಮಗೆ ಮನವರಿಕೆಯನ್ನು ಮಾಡಿದಾಗ, ನಿಮಗೆ ಮಾತನಾಡುವಂತಹ ಸೌಜನ್ಯವೂ ಇಲ್ಲ. ಇಲ್ಲಿ ಇನ್ನೂ ಚರ್ಚೆಯು ಮುಗಿದಿಲ್ಲ. ವಿಧಾನಪರಿಷತ್ತಿನಲ್ಲಿ ನಿಮಗೆ ಸ್ವಾತಂತ್ರ್ಯ ಇದೆ, ಈ ಸಂದರ್ಭದಲ್ಲಿ ನಾನು ಕೆ.ಎಫ್.ಸಿ.ಗಳ ಉದಾಹರಣೆಗಳನ್ನು ಕೊಟ್ಟರೆ ಬಹುಶಃ ನಿಮಗೆ ಆಶ್ಚರ್ಯವಾಗಬಹುದು. ಈಗತಾನೇ ಯಾರೋ ಕೆಲವರು ಬಂದಿದ್ದರು. ಹನಿ ನೀರಾವರಿ ಯೋಜನೆಯಲ್ಲಿ ಮೂರು ತಿಂಗಳಿಂದ ಒಂದು ಹನಿ ನೀರಷ್ಟೂ ಕೆಲಸವಾಗಲಿಲ್ಲ.....

ಅಧ್ಯಕ್ಷರು :– ಯಡಿಯೂರಪ್ಪನವರೇ, ನಿಮ್ಮ ಸ್ನೇಹಿತರೆಲ್ಲಾ ಸದನದ ಬಾವಿಯಲ್ಲಿದ್ದಾರೆ. ನೀವು ಮಾತನಾಡುತ್ತಿದ್ದೀರಿ. ಎಲ್ಲರೂ ಅವರವರ ಸ್ಥಾನಗಳಿಗೆ ಹೋಗಲಿ. ದಯಮಾಡಿ ಎಲ್ಲರೂ ಹೋಗಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅದರ ಬಗ್ಗೆ ನಾವೂ ಮಾತನಾಡಬೇಕು. ಎರಡು ನಿಮಿಷ ಟೈಂ ಕೊಡಿ.

ಅಧ್ಯಕ್ಷರು :– ಯಡಿಯೂರಪ್ಪನವರೇ, ನನ್ನ ವಿನಂತಿ ಏನೆಂದರೆ, ಎಲ್ಲಾ ಅವರವರ ಸ್ಥಾನಗಳಿಗೆ ಹೋಗಿ. ಟ್ರೆಷರಿ ಬೆಂಚ್‌ನಲ್ಲಿ ಪಾರ್ಲಿಮೆಂಟರಿ ಸಚಿವರಿದ್ದಾರೆ. ಅವರು ಏನು ಹೇಳುತ್ತಾರೆ ಕೇಳೋಣ. ಇದರ ಬಗ್ಗೆ ಚರ್ಚೆಯಾಗಲಿ, ಆದ್ದರಿಂದ ನಿಮ್ಮ ಸ್ನೇಹಿತರಿಗೆಲ್ಲಾ ಅವರವರ ಸ್ಥಾನಗಳಿಗೆ ಹೋಗಲು ತಾವು ದಯಮಾಡಿ ಸೂಚನೆ ಕೊಡಬೇಕೆಂದು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನೀವು ಅಲ್ಲಿ ಕುಳಿತಿರುವುದರಿಂದ ನಾವು ಬಹಳ ವಿನಯದಿಂದ ನಡೆದುಕೊಳ್ಳುತ್ತಿದ್ದೇವೆ. ಚರ್ಚೆಯಾಗಬೇಕು ಎಂದು ನಾವು ಅಪೇಕ್ಷೆ ಪಟ್ಟೆವು. ನಾವು ಕೇಳಿದಂಥ ಬೇಡಿಕೆಯನ್ನು ಈಡೇರಿಸಲು ನಿಮಗೆ ತೊಂದರೆಯೇನು ಎಂದು ನಾವು ಕೇಳಿದೆವು .....

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ ತಾವು ಸದನವನ್ನು ಮುಂದೂಡಿ. ಮುಖ್ಯಮಂತ್ರಿಗಳನ್ನು ಕರೆದು ಮಾತುಕತೆ ಆಡೋಣ. ಸದನವನ್ನು ಒಂದು ಹತ್ತು ನಿಮಿಷ ಮುಂದೂಡಿ.

(ಗೊಂದಲ)

ಅಧ್ಯಕ್ಷರು :– ಯಡಿಯೂರಪ್ಪನವರೇ, ದಯಮಾಡಿ ನಿಮ್ಮ ಸ್ನೇಹಿತರುಗಳಿಗೆ ಹೇಳಿ, ಅವರೆಲ್ಲಾ ಅವರವರ ಸ್ಥಾನಗಳಿಗೆ ಹೋಗಲಿ. ಸರ್ಕಾರದ ಪರವಾಗಿ ಇಲ್ಲಿ ಪಾರ್ಲಿಮೆಂಟರಿ ಸಚಿವರಿದ್ದಾರೆ. ಅವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ದಯಮಾಡಿ ಸದನವನ್ನು ಮುಂದೂಡಿ, ಸರ್ಕಾರದ ಜೊತೆ ಮಾತುಕತೆ ನಡೆಸೋಣ.

ಶ್ರೀ ವಾಟಾಳ್ ನಾಗರಾಜ್ :– 10 ನಿಮಿಷ ಸದನವನ್ನು ಮುಂದಕ್ಕೆ ಹಾಕಿ. ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸೋಣ. ಮಾತುಕತೆಯಾಡೋಣ. ಈ ವಿಷಯದಲ್ಲಿ ಸರ್ಕಾರ ನಡೆದುಕೊಂಡ ರೀತಿ ಸರಿಯಿಲ್ಲ, ಪ್ರಾಮಾಣಿಕತೆಯಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾವು ವೆಲ್‌ನಲ್ಲಿದ್ದೆವಲ್ಲಾ. ಇಂದಿನ ಸಭೆಗೆ ಉಪಮುಖ್ಯಮಂತ್ರಿಗಳು ಬರಬೇಕಾಗಿತ್ತಲೇ? ಮುಖ್ಯಮಂತ್ರಿಗಳು ಬರಬೇಕಾಗಿತ್ತಲ್ಲವೇ? ಮುಖ್ಯಮಂತ್ರಿಗಳಿಗೆ ಬೇರೆ ಏನೋ ಜವಾಬ್ದಾರಿ ಇತ್ತು ಎಂದರೆ ಉಪ ಮುಖ್ಯಮಂತ್ರಿ ಗಳಾದರೂ ಬರಬೇಕಿತ್ತಲ್ಲವೇ? ಇವರಿಗೆ ಯಾವುದೂ ಜಾವಾಬ್ದಾರಿಯಿಲ್ಲ. ವಿಧಾನಮಂಡಲದ ಅಧಿವೇಶನ ಇದ್ದಾಗ ನೀವು ಬೇರೆ ಕಡೆಗೆ ಮೋಜು ಮಾಡಲು ಹೋಗುತ್ತೀರಿ. ಮಂತ್ರಿಗಳು ಇಲ್ಲಿಗೆ ಬರದೇ ಹೊರದೇಶಕ್ಕೆ ಹೋಗುತ್ತಾರೆ. ನೀವು ಅವರಿಗೆ ಪರ್ಮಿಷನ್ ಕೊಟ್ಟಿರೇನು?

ಅಧ್ಯಕ್ಷರು :– ಯಡಿಯೂರಪ್ಪನವರೇ, ಎಲ್ಲಾ ಅವರವರ ಸ್ಥಾನಗಳಿಗೆ ಹೋಗಲು ತಾವು ಸೂಚನೆ ಕೊಡಿ. ಪಾರ್ಲಿಮೆಂಟರಿ ಸಚಿವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ವಾಟಾಳ್ ನಾಗರಾಜ್ :– 10 ನಿಮಿಷಕ್ಕೆ ಮುಂದಕ್ಕೆ ಹಾಕಿ, ಎಲ್ಲರನ್ನೂ ಕರೆಸಿ ಮಾತನಾಡೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ನಾನು ನಿಮ್ಮಿಂದ ತಿಳಿಯಲು ಇಚ್ಛೆಪಡುತ್ತೇನೆ. ಯಾವ ಯಾವ ಮಂತ್ರಿಗಳಿಗೆ ಹೊರದೇಶಕ್ಕೆ ಹೋಗಲು ನೀವು ಅನುಮತಿ ಕೊಟ್ಟಿದ್ದೀರಿ ಎಂಬುದನ್ನು ದಯಮಾಡಿ ಹೇಳಿ. ಹಾಗಿರುವಾಗ ಸದನವನ್ನು ಏಕೆ ಕರೆದಿರಿ? ಇಲ್ಲಿ ಸದನವನ್ನು ಕರೆದು, ಮೋಜು ಮಾಡಲು ಅವರನ್ನು ಬೇರೆ ಕಡೆ ಕಳುಹಿಸಿದ್ದಿರೇನು? ಅವರಿಗೆ ಬೇರೆ ಸಮಯ ಇರಲಿಲ್ಲವೇ? ಇವರಿಗೆ ಹೇಳುವರು, ಕೇಳುವವರು ಯಾರೂ ಇಲ್ಲ. ಒಬ್ಬ ಮಂತ್ರಿಯೂ ಬಂದು ಇಲ್ಲಿ ಕುಳಿತುಕೊಳ್ಳುವುದಿಲ್ಲ.

ಕಚ್ಚಾಡಿಕೊಂಡು ಬಡಿದಾಡಿಕೊಂಡು ಇದ್ದು, ಏನು ನಡೆಸಿದ್ದೀರಿ ಇಲ್ಲಿ? ರೈತರ ಬಗ್ಗೆ ಇಲ್ಲಿ ನಾವು ಅನಿವಾರ್ಯವಾಗಿ ಮಾತನಾಡಬೇಕಾಗಿದೆ. ನೀವೇಕೆ ಅನುಮತಿ ಕೊಟ್ಟಿರಿ ಎಂಬುದು ನನಗೆ ಅರ್ಥವಾಗಲಿಲ್ಲ.

(ಗೊಂದಲ)

ಅಧ್ಯಕ್ಷರು :– ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಬಿ.ಎಸ್.ಯಡಿಯೂರಪ್ಪ :– ರೈತರ ಪರವಾಗಿ ಮಾತನ್ನೇ ಆಡಬಾರದಂತೆ. ರೈತರ ಬಗ್ಗೆ ಕಳಕಳಿ ಇರುವವರು ಇಲ್ಲಿ ಒಂದು ಶಬ್ದವನ್ನೂ ಮಾತನಾಡಬಾರದು. ಯಡಿಯೂರಪ್ಪನವರೇ, ಇದೊಂದು ಅಯೋಗ್ಯ ಸರ್ಕಾರ, ಇದು ಉಪಯೋಗವಿಲ್ಲ ಎಂದು ನೀವು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :– ಈಗ ಸರ್ಕಾರದ ಪರವಾಗಿ ಏನು ಹೇಳುತ್ತಾರೋ ಕೇಳೋಣ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಯಡಿಯೂರಪ್ಪನವರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ರೈತರ ಬಗ್ಗೆ ನಾವು ಮಾಡಿದ್ದನ್ನು ಹೇಳುತ್ತೇವೆ. ರೈತರ ಪರಿಸ್ಥಿತಿ ಬಗ್ಗೆ ನಾವು ಕುಳಿತುಕೊಂಡು ಚರ್ಚೆ ಮಾಡೋಣ. ಆದರೆ ಈ ರೀತಿಯಾಗಿ ಮಾಡಿದರೆ ರೈತರ ಸಮಸ್ಯೆಗಳು ಬಗೆಹರಿಯುವುದಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ದಯಮಾಡಿ ನಮಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :– ನೀವು ಹಿರಿಯ ಸಮಸ್ಯರಾಗಿ ಹೀಗೆ ಮಾಡಿದರೆ ಹೇಗೆ? ನೀವು ಸದನದ ಬಾವಿಯಲ್ಲಿ ನಿಂತು ಮಾಡನಾಡಿದರೆ ಹೇಗೆ? ನೀವು ಮಾತನಾಡುವುದೇನಿದ್ದರೂ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಮಾತನಾಡಿ. ಮಾಧುಸ್ವಾಮಿಯವರೇ, ಈಗ ನೀವು ಒಂದು ನಿಮಿಷ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಅಧ್ಯಕ್ಷರೇ, ರೈತರ ಪರವಾಗಿ ಎಲ್ಲರಿಗೂ ಕಳಕಳಿಯಿದೆ ಎಂದು ಈ ಶಾಸನಸಭೆಯಲ್ಲಿ ಮಾತನಾಡಿಯಾಗಿದೆ. ನಾವು ಸರ್ಕಾರಕ್ಕೆ ಬಹಳ ವಿನಯವಾಗಿ ವಿನಂತಿ ಮಾಡಿಕೊಂಡಿದ್ದೇವೆ. ಈಗ ಯಾವುದೇ

ಸುಗ್ಗಿ ಕಾಲವಿಲ್ಲ, ರೈತನಿಗೆ ಯಾವುದೇ ಹಣ ಬರುವಂಥ ಪರಿಸ್ಥಿತಿ ಇಲ್ಲ, ಅಸಲನ್ನು ಕಟ್ಟಿದರೆ ಬಡ್ಡಿಯನ್ನು ಮನ್ನಾ ಮಾಡುವಂಥ ಈ ಕಾರ್ಯಕ್ರಮವನ್ನು ಮುಂದಿನ ಮಾರ್ಚ್‌ಎಂಡ್‌ವರೆಗೆ ಮುಂದಕ್ಕೆ ಹಾಕಿ ಎಂದು ಕೇಳಿದ್ದೇವೆ. ಚರ್ಚೆ ಅಪೂರ್ಣವಾಗಿದೆ. ಶಾಸನಸಭೆಯಲ್ಲಿ ಪೂರ್ಣ ಚರ್ಚೆಯಾಗಬೇಕಾಗಿತ್ತು. ನಾವೆಲ್ಲಾ ಕ್ಲಾರಿಫಿಕೇಷನ್ಸ್ ಕೇಳಬೇಕಾಗಿತ್ತು, ಆನಂತರ ಅವರು ಅದಕ್ಕೆ ಉತ್ತರ ಹೇಳಬೇಕಾಗಿತ್ತು, ಇದರಲ್ಲಿ ಎಲ್ಲೋ ಸ್ವಲ್ಪ ಏರುಪೇರು ಆಗಿದೆ. ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ, ಎಲ್ಲರನ್ನೂ ಕರೆಸಿ, ಎಲ್ಲರೂ ಕುಳಿತುಕೊಂಡು ಮಾತನಾಡಿ ಈ ಸಮಸ್ಯೆಗೆ ನಾವು ಏನಾದರೊಂದು ಪರಿಹಾರವನ್ನು ಕಂಡುಹಿಡಿಯಬೇಕು. ಶಾಸನಸಭೆ ಹೇಗಾದರೂ ನಡೆಯಲಿ, ಏನಾದರೂ ಮಾಡಿಕೊಳ್ಳಲಿ ಎಂದು ಇಂಥ ಜವಾಬ್ದಾರಿಯುತ ಕಾಲದಲ್ಲಿ ಸಂಬಂಧಿಸಿದ ಜವಾಬ್ದಾರಿಯುತ ಮಂತ್ರಿಗಳು ಇಲ್ಲಿಗೆ ಬರದೇ ಹೋದರೆ ಹೇಗೆ? ನಿನ್ನೆ ಅವರು ಇಲ್ಲಿ ಇದ್ದಾಗಲೇ ಧರಣಿ ಆರಂಭವಾಗಿತ್ತು. ನಾಳೆ ಬೆಳಿಗ್ಗೆಯೂ ಇಲ್ಲಿ ಧರಣಿ ಆಗುತ್ತದೆ ಎಂದು ಅವರಿಗೆ ಗೊತ್ತಿತ್ತು. ಸದನವನ್ನು ನಡೆಸಬೇಕು ಎನ್ನುವ ಕಳಕಳಿ ಸರ್ಕಾರಕ್ಕೂ ನಮ್ಮ ಹಾಗೆಯೇ ಇರಬೇಕು. ಅವರು ಸದನಕ್ಕೆ ಬರಬೇಕಾಗಿತ್ತು. ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ, ಕನಿಷ್ಠವೆಂದರೆ, ಸಂಬಂಧಪಟ್ಟವರನ್ನು ತಮ್ಮ ಕಛೇರಿಗೆ ಕರೆಸಿಬಿಟ್ಟು ಮಾತುಕತೆಯಾಡಿ. ಅಲ್ಲಿ, ಅವರ ಕಷ್ಟವನ್ನು ಅವರು ಹೇಳಿಕೊಳ್ಳಲಿ. ನಮ್ಮ ವಿನಂತಿಯನ್ನು ನಾವು ಮಾಡಿಕೊಳ್ಳುತ್ತೇವೆ. ಇಲ್ಲಿರುವ ಕಾನೂನು ಮತ್ತು ಸಂಸದೀಯ ಸಚಿವರು ಅದಕ್ಕೆ ಒಂದು ಅವಕಾಶವನ್ನು ಈಗಲಾದರೂ ಮಾಡಿಕೊಡಬೇಕು. ಅವರು ಸನ್ಮಾನ್ಯ ಸಿದ್ಧರಾಮಯ್ಯನವರನ್ನು ಈ ಶಾಸನಸಭೆ ನಡೆಯಲು ಅವಕಾಶ ಮಾಡಿಕೊಡಬೇಕು. 'ಪ್ರಥಮ ಚುಂಬನೇ ದಂತ ಭಗ್ನಂ' ಎನ್ನುವ ಹಾಗೆ ಅಧಿವೇಶನ ಶುರು ಮಾಡಿದ ದಿನವೇ ಅಸೆಂಬ್ಲಿ ನಡೆಯಲಿಲ್ಲ ಎನ್ನುವ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬಾರದಿತ್ತು. ನಾನು ಅವರನ್ನು ರಿಕ್ವೆಸ್ಟ್ ಮಾಡುತ್ತಿದ್ದೇನೆ. Please seek this opportunity, ಎಲ್ಲರೂ ಕುಳಿತುಕೊಂಡು ಮಾತನಾಡೋಣ, ನಿಮ್ಮ ಕಷ್ಟ ಏನೆಂದು ನಮಗೆ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಮಾಧುಸ್ವಾಮಿಯವರು ಒಂದು ಸಲಹೆ ಕೊಟ್ಟರು. ಮಾಧುಸ್ವಾಮಿಯವರ ಸಲಹೆಗೆ ನಾವು ಸ್ಪಂದಿಸುತ್ತೇವೆ. ಅದರಲ್ಲೇನೂ ಎರಡು ಅಭಿಪ್ರಾಯಗಳಿಲ್ಲ. ಆದರೆ ಸನ್ಮಾನ್ಯ ಯಡಿಯೂರಪ್ಪನವರು ಸಾರಾಸಗಟಾಗಿ ಏನು ರಾಜಕೀಯ ಭಾಷಣವನ್ನು ಮಾಡಿದರು, ಅದನ್ನು ನಾವು ಒಪ್ಪುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ :– ರಾಜಕೀಯವನ್ನು ನಿಮ್ಮ ಸಿದ್ಧರಾಮಯ್ಯನವರು ಪ್ರಾರಂಭ ಮಾಡಿದರು. ರೈತರ ಬಗ್ಗೆ ಮಾತನಾಡುತ್ತಿದ್ದರೆ, ರಾಜಕೀಯ ಮಾಡುವುದಕ್ಕೆ

ಬಂದಿದ್ದೀರಿ ಎಂದು ಅವರು ಹೇಳಿದರು. ರಾಜಕಾರಣ ಮಾಡಿದವರು ಅವರು ನಾವಲ್ಲ. ರಾಜಕೀಯ ಮಾಡುವುದಕ್ಕೆ ಹೊರಟಿರುವಂಥವರು ಅವರು, ಸನ್ಮಾನ್ಯ ಸಿದ್ಧರಾಮಯ್ಯನವರು ರಾಜಕೀಯ ಮಾಡಿದರು.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ :– ಕೇಂದ್ರದಲ್ಲಿ ಅವರ ಸರ್ಕಾರವಿದ್ದಾಗ, ರೈತರ ಸಾಲಕ್ಕೆ ಆರು ಪರ್ಸೆಂಟ್ ಬಡ್ಡಿ ಮಾಡಿ ಎಂದು ಎಷ್ಟು ಬಡಿದಾಡಿದರೂ ಸಹ ಅವರು ಒಂದು ಪರ್ಸೆಂಟ್‌ನ್ನೂ ಕಡಿಮೆ ಮಾಡಲಿಲ್ಲ. ಇವತ್ತು ಇವರು ವಿರೋಧ ಪಕ್ಷಕ್ಕೆ ಬಂದಾಗ, ಇವರಿಗೆ ರೈತರ ಬಗ್ಗೆ ಚಿಂತೆ ಬಂದಿದೆ.

(ಗೊಂದಲ)

(ಧರಣಿ ನಿರತ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು :– ನೀವೆಲ್ಲಾ ಸದನದ ಬಾವಿಗೆ ಬಂದಿದ್ದೀರಿ. ಗೌರವವಾಗಿ ನಿಂತುಕೊಳ್ಳಿ ನೀವು. ಈ ರೀತಿ ಮಾಡುವುದು ಈ ಸದನಕ್ಕೆ ಶೋಭೆ ತರುವುದಿಲ್ಲ. ಅವರು ಮಾತನಾಡುತ್ತಿರುವುದು ಕಡತಕ್ಕೆ ಹೋಗಬೇಕೋ, ಬೇಡವೋ?

(ಗೊಂದಲ)

ಮಾನ್ಯ ಸದಸ್ಯರು :– ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಿದ್ದಾರೆ ಎನ್ನುವುದನ್ನು ಕೇಳುವುದಕ್ಕೆ ಆಗುತ್ತಿಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಅಧ್ಯಕ್ಷರು :– ಇದು ಸರಿಯಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ :– ಇವರು ರಾಜಕೀಯ ಮಾಡುವುದಕ್ಕೆ ನೋಡುತ್ತಿದ್ದಾರೆಯೇ ಹೊರತು ರೈತರ ಬಗ್ಗೆ ಕಾಳಜಿಯಿಂದ ಅಲ್ಲ.

(ಗೊಂದಲ)

ಅಧ್ಯಕ್ಷರು :– ಪಾರ್ಲಿಮೆಂಟರಿ ಸಚಿವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಅಧ್ಯಕ್ಷರು :– ಈಗ ಸದನವನ್ನು ಅರ್ಧಗಂಟೆ ಕಾಲ ಮುಂದೂಡಲಾಗಿದೆ.

(ಸದನವು ಬೆಳಿಗ್ಗೆ 10 : 58 ಮುಂದೂಡಲ್ಪಟ್ಟು ಪುನಃ ಅರ್ಧಗಂಟೆಯ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 1 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠವನ್ನಲಂಕರಿಸಿದರು)

(ಸದನದ ಬಾವಿಯಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರುಗಳು ಧರಣಿ ನಿರತರಾಗಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು :– ದಯಮಾಡಿ ಸದನದ ಬಾವಿಯೊಳಗಿರುವ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಆಸನಗಳಿಗೆ ತೆರಳಿ ಸುಮ್ಮನೆ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು :– ಮಾಧುಸ್ವಾಮಿಯವರೆ, ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು :– ನಾನು ಏನು ಹೇಳುತ್ತಿದ್ದೇನೆಂದರೆ, ಈಗ ತಾವೆಲ್ಲರೂ ಇಲ್ಲಿದ್ದೀರಿ. ಮಾನ್ಯ ಯಡಿಯೂರಪ್ಪನವರೆ, ಪ್ರಜಾಪ್ರಭುತ್ವದ ನಿಯಮಗಳನ್ನು ಅನುಸರಿಸಬೇಕೆಂದು ನಿಮ್ಮ ಸದಸ್ಯರುಗಳಿಗೆ ಹೇಳಿ. ಇದು ಯಾರಿಗೂ ಶೋಭೆ ತರುವಂಥಾದ್ದಲ್ಲ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಮಾಧುಸ್ವಾಮಿಯವರೆ, ನೀವೇನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಲಿ.

(ಗೊಂದಲ)

ಅಧ್ಯಕ್ಷರು :– ದಯಮಾಡಿ ಘೋಷಣೆಗಳನ್ನು ಕೂಗಬೇಡಿ, ಸಹಕರಿಸಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ :– ಕೃಷಿ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿರುವುದರಿಂದ ರೈತರೆಲ್ಲರೂ ನಮಗೆ ಆಶೀರ್ವಾದ ಮಾಡುತ್ತಿದ್ದರೆ, ನೀವೆಲ್ಲರೂ ವಿರೋಧಿಸುತ್ತಿದ್ದೀರಲ್ಲಾ.

(ಗೊಂದಲ)

ಅಧ್ಯಕ್ಷರು :– ಏನಿದು? ನೀವು ಜನ ಪ್ರತಿನಿಧಿಗಳಾ, ಏನಿದು ? ಈ ಸ್ಥಾನಕ್ಕೆ ಇದು ಗೌರವ ತರುತ್ತದೆಯೇ? I cannot understand.

(ಗೊಂದಲ)

(ಸದನದ ಬಾವಿಯಲ್ಲಿ ಬಿಜೆಪಿ ಸದಸ್ಯರು ನಿರಂತರವಾಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)

ಅಧ್ಯಕ್ಷರು :– ಸರ್ಕಾರ ಏನು ಹೇಳುತ್ತದೆಂಬುದನ್ನು ಮೊದಲು ಕೇಳಿ. ಸುಮ್ಮನೆ ಘೋಷಣೆ ಕೂಗಿದರೆ ಇದು ಯಾವ ದೇವರಿಗೆ ಪ್ರೀತಿ?

(ಗೊಂದಲ)

ಅಧ್ಯಕ್ಷರು :– ಸದನದ ಬಾವಿಯೊಳಗಿರುವ ಮಾನ್ಯ ಸದಸ್ಯರುಗಳು ಗೌರವದಿಂದ ಕೇಳಬೇಕು. ಮಾನ್ಯ ಉಪ ಮುಖ್ಯಮಂತ್ರಿಯವರು ಏನು ಹೇಳಿಕೆ ಕೊಡುತ್ತಾರೆಂಬುದನ್ನು ಕೇಳಿ.

(ಗೊಂದಲ)

ಅಧ್ಯಕ್ಷರು :– ಅವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

(ಗೊಂದಲ)

ಅಧ್ಯಕ್ಷರು :– ನಿಮಗೆ ಅರ್ಥವಾಗುವುದಿಲ್ಲವೇ?

(ಗೊಂದಲ)

ಅಧ್ಯಕ್ಷರು :– ಏನೊಂದೂ ಮಾತನಾಡುವುದಕ್ಕೂ ನೀವು ಬಿಡುತ್ತಿಲ್ಲವಲ್ಲಾ ನೀವು ಪೋಸ್ಟ್ ಆಫೀಸ್ ತರಹ ಇರುತ್ತೀರಾ? ಸಮಸ್ಯೆ ಏನಿದೆ ಮತ್ತು ಅವರು ಏನು ಹೇಳುತ್ತಾರೆಂಬುದನ್ನಾದರೂ ನೀವು ಕೇಳಿ ತಿಳಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ಈಗ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಉಪ ಮುಖ್ಯಮಂತ್ರಿಗಳು ಹೇಳಿಕೆ ಕೊಡಲಿ.

ಶ್ರೀ ಸಿದ್ಧರಾಮಯ್ಯ :- ನೀವು ಯಾವ ರೈತರ ಪರವಾಗಿದ್ದೀರಿ? ನಿಮಗೆ ರೈತರೂ ಗೊತ್ತಿಲ್ಲ, ಹೊಲ ಗೊತ್ತಿಲ್ಲ, ಏನೂ ಗೊತ್ತಿಲ್ಲ.

ಅಧ್ಯಕ್ಷರು :- ಈಗ ಹಣಕಾಸು ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ಮೊದಲು ಅವರು ಹೇಳಿಕೆ ನೀಡಲಿ. ಅನಂತರ ತಾವು ಏನು ಕೇಳಬೇಕೆಂದಿದ್ದೀರೋ ಕೇಳಿ. ಆದರೆ ನೀವು ಯಾವುದಕ್ಕೂ ಅವಕಾಶ ಕೊಡದೆ ಈ ರೀತಿ ಮಾಡುತ್ತಿರುವುದು ಸರಿಯಲ್ಲ. ದಯಮಾಡಿ ಹಣಕಾಸು ಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರು ಹೇಳಿಕೆ ನೀಡಬೇಕು.

(ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ, ಗದ್ದಲದ ನಡುವೆ ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನಂತೆ ಹೇಳಿಕೆ ನೀಡಿದರು).

*** ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :-** ಮಾನ್ಯ ಅಧ್ಯಕ್ಷರೇ, ರೈತರಿಗೆ ಇಡೀ ದೇಶದಲ್ಲಿಯೇ ಯಾವುದೇ ರಾಜ್ಯದಲ್ಲಿರುವ ಸಹಕಾರಿ ಬ್ಯಾಂಕುಗಳೂ ಕೂಡ ಶೇಕಡ 6 ರ ಬಡ್ಡಿ ದರದಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡಲಿಲ್ಲ. ಕರ್ನಾಟಕ ರಾಜ್ಯ ರೈತರ ಪರವಾಗಿದೆ. ಈ ಸಮ್ಮಿಶ್ರ ಸರ್ಕಾರದಲ್ಲಿರುವ ನಾವುಗಳು ರೈತರ ಪರವಾಗಿ ತೆಗೆದುಕೊಳ್ಳುವ ನಿರ್ಣಯಗಳನ್ನು ಇಡೀ ರಾಜ್ಯದ ಜನರು, ರೈತರು ಸಂಪೂರ್ಣ ಸ್ವಾಗತಿಸಿದ್ದಾರೆ. ನಾವು ಕೊಟ್ಟಿರುವ ಸೌಲಭ್ಯಗಳೆಲ್ಲವನ್ನೂ ರೈತರು ಈಗಾಗಲೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ರೈತರು ಸಮಾಧಾನದಿಂದಿದ್ದಾರೆ. ಆದರೆ, ಭಾರತೀಯ ಜನತಾ ಪಕ್ಷದವರು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ರೈತರ ಪರವಾಗಿ ಒಂದೇ ಒಂದು ಸಣ್ಣ ಸೌಲಭ್ಯವನ್ನೂ ನೀಡುವುದಕ್ಕೆ ಸಾಧ್ಯವಾಗಲಿಲ್ಲ. ರೈತರ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ನಾಚಿಕೆಯಾಗಬೇಕು. ರೈತರ ಬಗ್ಗೆ ಮಾತನಾಡಲು ಇವರಿಗೆ ನೈತಿಕ ಹಕ್ಕಿಲ್ಲ. ನಾನು ಮಾನ್ಯ ಯಡಿಯೂರಪ್ಪನವರಿಗೆ, ಭಾರತೀಯ ಜನತಾ ಪಕ್ಷದವರಿಗೆ ಕೇಳುತ್ತಿದೇನೆ. ಸುಮಾರು 2–3 ವರ್ಷಗಳ ಕಾಲ ಕರ್ನಾಟಕದಲ್ಲಿ ಸತತವಾಗಿ ಬರಗಾಲ ಇದ್ದಾಗ ಇದೇ ಭಾರತೀಯ ಜನತಾ ಪಕ್ಷದವರು ವಿರೋಧ ಪಕ್ಷದಲ್ಲಿದ್ದರು. ಆಗ ರೈತರಿಗೆ ಒಂದು ಬಿಡಿಗಾಸು, ಒಂದು ರೂಪಾಯಿಯಷ್ಟೂ ರೈತರಿಗೆ ಸಹಾಯ ಮಾಡುವ ಕುರಿತಂತೆ ಅಂದಿನ ಕೇಂದ್ರದ ಎನ್‌ಡಿಎ ಸರ್ಕಾರಕ್ಕೆ ಒತ್ತಾಯ ಹಾಕಲಿಲ್ಲ. ಇವರಿಂದ ಸಾಧ್ಯವಾಗದಿರುವುದಕ್ಕೆ ನಾಚಿಕೆಯಾಗಬೇಕು. ಇವೊತ್ತು ರೈತರಿಗೆ ಅನ್ಯಾಯ

ಮಾಡುವುದಕ್ಕೋಸ್ಕರ, ಅವರನ್ನು ತಪ್ಪುದಾರಿಗೆಳೆಯುವುದಕ್ಕೋಸ್ಕರ ನೀವು ಧರಣಿ ಮಾಡುತ್ತಿದ್ದೀರೇ ಹೊರತು ರೈತರ ಹಿತ ಕಾಪಾಡತಕ್ಕ ಕಾರಣಕ್ಕೋಸ್ಕರವಲ್ಲ ಎನ್ನುವುದು ರಾಜ್ಯದ ಜನರು ಅರ್ಥ ಮಾಡಿಕೊಂಡಿದ್ದಾರೆ. ಇವೊತ್ತು ರೈತ ಸಾಲ ಕಟ್ಟಿದರೆ, ಅಸಲು ಕಟ್ಟಿದರೆ ಸುಮಾರು 950 ಕೋಟಿ ರೂಪಯಿಗಳಷ್ಟು ರಾಜ್ಯ ಸರ್ಕಾರ ಬಡ್ಡಿ ಮತ್ತು ಸುಸ್ತು ಬಡ್ಡಿ ಮನ್ನಾ ಮಾಡುತ್ತಿದೆ. ಹೊಸದಾಗಿ ಶೇಕಡ 6 ರ ಬಡ್ಡಿ ದರದಲ್ಲಿ ಸಾಲ ದೊರೆಯುತ್ತದೆ. ರೈತರ ವಿರೋಧಿಗಳು ಇವರು, ರೈತರಿಗೆ ಸಹಾಯವಾಗಬಾರದೆಂಬ ಕಾರಣಕ್ಕೋಸ್ಕರವಾಗಿ ಈ ಗೊಂದಲವನ್ನು ನಿರ್ಮಾಣ ಮಾಡುತ್ತಿದ್ದಾರೆ. ನಾನು ರೈತರಲ್ಲಿ ಮನವಿ ಮಾಡುತ್ತಿದ್ದೇನೆ; ನಾನು ನಿಮಗೋಸ್ಕರ, ರೈತರ ಹಿತದೃಷ್ಟಿಯಿಂದ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡತಕ್ಕದ್ದನ್ನು ಸೆಪ್ಟೆಂಬರ್ ಅಂತ್ಯದವರೆಗೆ ಅಂದರೆ ಮೂರು ತಿಂಗಳವರೆಗೆ – ಜುಲೈ, ಆಗಸ್ಟ್, ಸೆಪ್ಟೆಂಬರ್, 30 ರವರೆಗೆ ಅಸಲು ಕಟ್ಟಲು ರೈತರಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಇವರುಗಳ ಧರಣಿಯಿಂದ ಅವಧಿ ವಿಸ್ತರಣೆ ಮಾಡುತ್ತಿಲ್ಲ. ನಾನು ಇವರಿಂದ ರೈತರ ಬಗ್ಗೆ ಬಗ್ಗೆ ಕಲಿಯುಂಥಾದ್ದು ಏನೂ ಇಲ್ಲ. ಇವರೆಲ್ಲರೂ ರೈತರ ವಿರೋಧಿಗಳು. ಇವೊತ್ತು ಇವರ ಪಕ್ಷದವರೆ ಮಧ್ಯಪ್ರದೇಶದಲ್ಲಿದ್ದಾರೆ, ಗುಜರಾತ್‌ನಲ್ಲಿದ್ದಾರೆ, ರಾಜಸ್ಥಾನದಲ್ಲಿದ್ದಾರೆ ಮತ್ತು ಛತ್ತೀಸ್‌ಘಡ್‌ನಲ್ಲಿದ್ದಾರೆ. ಯಾವ ರಾಜ್ಯದಲ್ಲಿ ರೈತರಿಗೆ ಆರು ರೂಪಾಯಿ ಬಡ್ಡಿದರದಲ್ಲಿ ಸಾಲ ಕೊಡತಕ್ಕ ಕಾರ್ಯಕ್ರಮ ಮಾಡಿದ್ದಾರೆ ಹೇಳಿ ನೋಡೋಣ? ಇವರಿಗೆ ರೈತರ ಬಗ್ಗೆ ಕಳಕಳಿ ಇದ್ದರೆ, ಮಧ್ಯಪ್ರದೇಶ್, ರಾಜಸ್ಥಾನ, ಛತ್ತೀಸ್‌ಘಡ್, ಗುಜರಾತ್ ಎಲ್ಲೆಲ್ಲಿ ನೀವಿದ್ದೀರಿ, ಅಲ್ಲಿ ಆರು ರೂಪಾಯಿ ಬಡ್ಡಿಗೆ ಸಾಲ ಒದಗಿಸುವ ಕಾರ್ಯಕ್ರಮವನ್ನು ಮಾಡಿ ನೋಡೋಣ?

(ಗೊಂದಲ)

ಇಡೀ ಕರ್ನಾಟಕದ ರೈತರಿಗೆ ನಾನು ಮನವಿ ಮಾಡುತ್ತೇನೆ. ರೈತರು ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಸೆಪ್ಟೆಂಬರ್ ಒಳಗೆ ಅಸಲು ಕಟ್ಟಬೇಕು, ಬಡ್ಡಿ ಮನ್ನಾ ಸೌಲಭ್ಯ ಪಡೆದುಕೊಳ್ಳಬೇಕೆಂದು ಕಳಕಳಿಯ ಮನವಿಯನ್ನು ನಿಮ್ಮ ಮೂಲಕ ಮಾಡುತ್ತಿದ್ದೇನೆ.

ಅಧ್ಯಕ್ಷರು :– ಸದನವು ಮುಂದೂಲ್ವಟ್ಟು ಸೋಮವಾರ ಬೆಳಿಗ್ಗೆ 11 : 00 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 1 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 4 ನೇ ಜುಲೈ 2005 ರ ಸೋಮವಾರದಂದು ಬೆಳಿಗ್ಗೆ 11 : 00 ಗಂಟೆಗೆ ಸೇರಲು ನಿಶ್ಚಯಿಸಿತು)

---

* ಈ ಭಾಷಣವು ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಪರಿಷ್ಕರಿಸಲ್ಪಟ್ಟಿದೆ.